# ಶ್ರೀಮಾತೆಯವರೊಡನೆ ಮಾತುಕತೆ



ಸರಯೂ [illegible]

**ಜನವರಿ ೧೯೧೧: ಪ್ರಥಮ ದರ್ಶನ :** ಅಂದು ಶುಕ್ರವಾರ, ಕಲ್ಕತ್ತೆಯ ಪಾಟಾಲ್ ಡಾಂಗಾದ ಶ್ರೀಯುತ... ನು ನಮ್ಮ ಮನೆಗೆ ಬಂದನು. ನಂತರ ಹೇಳಿದನು "ನಾಳೆ ಶನಿವಾರ ನಾವು ಶ್ರೀಮಾತೆಯವರ ದರ್ಶನಕ್ಕಾಗಿ ಹೋಗೋಣ, ನೀವು ತಯಾರಾಗಿರಿ" ಎಂದು. ಅಂದರೆ ನಾಳೆ ಶ್ರೀಮಾತೆಯವರ ದರ್ಶನ ಸಿಗುತ್ತದೆ! ಈ ಶುಭ ಚಿಂತನೆಯಲ್ಲಿ ರಾತ್ರಿ ಇಡೀ ನಿದ್ದೆ ಇಲ್ಲ. ಇಂದಾಗಲೇ ೧೯೧೧ನೇ ಇಸವಿ. ಸುಮಾರು ೧೪-೧೫ ವರ್ಷಗಳಿಂದ ಕಲ್ಕತ್ತಾ ನಗರದಲ್ಲಿದ್ದೇನೆ. ಆದರೂ ಒಮ್ಮೆಯೂ ಶ್ರೀಮಾತೆಯವರ ದರ್ಶನಭಾಗ್ಯ ಮಾಡಿಲ್ಲ. ಇಷ್ಟು ವರ್ಷಗಳ ನಂತರ ಶ್ರೀಮಾತೆಯವರ ದರ್ಶನಭಾಗ್ಯ ಸಿಕ್ಕಿದೆ. ಬೆಳಿಗ್ಗೆ ಬ್ರಾಹ್ಮಸಮಾಜದ ಬಾಲಿಕಾ ವಿದ್ಯಾಲಯದಿಂದ ಸುಮತಿಯನ್ನು ಕರೆದುಕೊಂಡು ಶ್ರೀಮಾತೆಯವರ ದರ್ಶನಕ್ಕಾಗಿ ಹೊರಟೆ. ಮನಸ್ಸಿನಲ್ಲಿ ಎಂತಹ ನಿರೀಕ್ಷೆ, ದುಗುಡ ತುಂಬಿತ್ತು – ಅದನ್ನು ವರ್ಣಿಸಲು ಸಾಧ್ಯವಿಲ್ಲ!

ಬಾಗ್‌ಬಜಾರ್‌ನ ಶ್ರೀಮಾತೆಯ ಮನೆಯನ್ನು ತಲುಪಿದಾಗ ಶ್ರೀಮಾತೆಯವರು ಬಾಗಿಲಲ್ಲೇ ನಿಂತಿರುವುದನ್ನು ಕಂಡೆ. ಒಂದು ಕಾಲು ಹೊಸ್ತಿಲ ಮೇಲೆ, ಮತ್ತೊಂದು ಫುಟ್‌ರಗ್ ಮೇಲೆ; ತಲೆಯ ಮೇಲಿಂದ ಸೆರಗು ಜಾರಿದೆ. ಎಡಗೈ ಮೇಲಿದೆ, ಬಲಗೈ ಕೆಳಗಿದೆ. ನೆಟ್ಟ ದೃಷ್ಟಿಯಿಂದ ಏನನ್ನೋ ನೋಡುತ್ತಾ ನಿಂತಿದ್ದಾರೆ. ನಾವು ಶ್ರೀಮಾತೆಗೆ ನಮಸ್ಕರಿಸಿದೆವು. ಸುಮತಿಗೆ ಮೊದಲೇ ಶ್ರೀಮಾತೆಯವರ ಪರಿಚಯ ಇದ್ದದ್ದರಿಂದ ಅವಳೇ ನನ್ನನ್ನು "ನನ್ನ ಅಕ್ಕ" ಎಂದು ಪರಿಚಯಿಸಿದಳು. ಶ್ರೀಮಾತೆ ಆಗ ನನ್ನ ಕಡೆ ನೋಡುತ್ತಾ "ನೋಡಮ್ಮ, ಇವರುಗಳಿಂದ ಎಷ್ಟು ತೊಂದರೆ. ತಮ್ಮನ ಹೆಂಡತಿ, ತಮ್ಮನ ಮಗಳು ರಾಧು – ಎಲ್ಲರಿಗೂ ಜ್ವರ. ಯಾರು ಇವರ ಉಪಚಾರ ಮಾಡುತ್ತಾರೋ ಗೊತ್ತಿಲ್ಲ. ಇರಲಿ, ನೀನು ಕುಳಿತುಕೋ. ನಾನು ಬಟ್ಟೆ ಒಗೆದು ಬರುತ್ತೇನೆ." ಎಂದರು. ಸರಿ ನಾವು ಕುಳಿತೆವು. ಸ್ವಲ್ಪ ಸಮಯದ ನಂತರ ಬಟ್ಟೆ ಒಗೆದು ಮುಗಿಸಿ ತಮ್ಮ ಎರಡೂ ಕೈ ಮುಷ್ಟಿಗಳಲ್ಲಿ ಜಿಲೇಬಿ ಪ್ರಸಾದ ತಂದು ಅದನ್ನು ಕೊಡುತ್ತಾ ಹೇಳಿದರು – "ನಿನ್ನ ಸೊಸೆಗೆ ಕೊಡು ಮತ್ತು ನೀನು ತೆಗೆದುಕೊ" ಎಂದು. ಸುಮತಿಗೆ ಶಾಲೆಗೆ ಹೋಗಲು ಹೊತ್ತಾಗುವುದರಿಂದ ಅಂದು ಶೀಘ್ರದಲ್ಲೇ ನಾವು ಮಾತೆಯಿಂದ ಬೀಳ್ಕೊಂಡೆವು. ಐದು ನಿಮಿಷಗಳ ಭೇಟಿಯೂ ಇಲ್ಲ. ನಿರಾಶೆ ತುಂಬಿದ ಹೃದಯದಿಂದ ಹೊರಟೆವು. ಶ್ರೀಮಾತೆ "ಮತ್ತೆ ಬಾ" ಎಂದು ಪ್ರೀತಿಯಿಂದ ಬೀಳ್ಕೊಟ್ಟರು.

**೧೨-೧೨-೧೯೧೧ :** ಇಂದು ನಾನು ಬಾಗ್‌ಬಜಾರಿನ (ಉದ್ಬೋಧನ) ಮಾತೆಯ ಮನೆಗೆ ಹೋಗಿ ನೋಡಿದರೆ ಶ್ರೀಮಾತೆಯವರು ಬಲರಾಮ್ ಬಾಬುವಿನ ಮನೆಗೆ ಹೋಗಿದ್ದಾರೆ. ಸರಿ, ಸ್ವಲ್ಪ ಕಾಯುತ್ತಲೇ ಶ್ರೀಮಾತೆ ಬಂದರು. ಪ್ರಣಾಮ ಮಾಡುತ್ತಿದ್ದಂತೆ ನಗುಮುಖದಿಂದ "ಯಾರ ಜೊತೆ ಬಂದೆ?" ಎಂದು ಕೇಳಿದರು. "ತಮ್ಮನ ಮಗನ ಜೊತೆ" ಎಂದುತ್ತರಿಸಿದೆ.

**ಶ್ರೀಮಾತೆ:** "ಚೆನ್ನಾಗಿದ್ದೀಯಾ? ನಿನ್ನ ತಂಗಿ ಹೇಗಿದ್ದಾಳೆ? ಇಷ್ಟು ದಿನ ನೀನು ಬಾರದಿದ್ದನ್ನು ಕಂಡು ಚಿಂತಿಸುತ್ತಿದ್ದೆ – ಏನಪ್ಪಾ, ಆರೋಗ್ಯವಾಗಿರುವೆಯಾ? ಎಂದು."

ಕೇವಲ ಒಂದು ದಿನ, ಅದೂ ೫ ನಿಮಿಷಗಳ ಭೇಟಿ. ಅಷ್ಟಕ್ಕೆ ಶ್ರೀಮಾತೆ ನನ್ನ ಬಗ್ಗೆ ಇಷ್ಟು ಚಿಂತಿಸುತ್ತಿದ್ದಾರೆ! ಇದನ್ನು ಭಾವಿಸಿ ವಿಸ್ಮಯ ಮತ್ತು ಆನಂದದಿಂದ ನನ್ನ ಕಣ್ಣಲ್ಲಿ ನೀರು ತುಂಬಿಕೊಂಡಿತು.

**ಶ್ರೀಮಾತೆ** (ನನ್ನನ್ನೇ ಪ್ರೀತಿಯಿಂದ ನೋಡುತ್ತಾ): "ನೀನು ಇಲ್ಲಿ ಬಂದಿದ್ದೀಯೆ, ಅದರಿಂದಲೋ ಏನೋ ನನ್ನ ಮನಸ್ಸು ಅಲ್ಲಿ (ಬಲರಾಮ್ ಬಾಬುವಿನ ಮನೆಯಲ್ಲಿ) ಬಹಳ ಚಂಚಲಗೊಂಡಿತು." ನನಗಂತೂ ಒಮ್ಮೆಲೆ ಈ ಸ್ನೇಹವನ್ನು ಕಂಡು ಆಶ್ಚರ್ಯದಿಂದ ಗಲಿಬಿಲಿ ಆಯಿತು.

ಶ್ರೀಮಾತೆಯ ಸಹೋದರನ ಮಗ ಕ್ಷುಧಿಗಾಗಿ, ಸುಮತಿ ಎರಡು ಉಣ್ಣೆಯ ಟೋಪಿಗಳನ್ನು ಕಳುಹಿಸಿದ್ದಳು. ಅದನ್ನು ಅವರಿಗೆ ಕೊಟ್ಟೆ. ಈ ಅಲ್ಪ ವಸ್ತುವನ್ನು ಪಡೆದು ಅದೆಷ್ಟು ಆನಂದವನ್ನು ವ್ಯಕ್ತಪಡಿಸಿದರು! ಹಾಸಿಗೆಯ ಮೇಲೆ ಕುಳಿತುಕೊಳ್ಳುತ್ತಾ "ಬಾಮ್ಮಾ, ನನ್ನ ಬಳಿ ಕುಳಿತುಕೋ" ಎಂದರು. ಪಕ್ಕದಲ್ಲೇ ಕುಳಿತೆ. ಶ್ರೀಮಾತೆ ಪ್ರೀತಿಯಿಂದ ಹೇಳಿದರು "ನೋಡಮ್ಮ, ನಿನ್ನನ್ನು ಅನೇಕ ಬಾರಿ ನೋಡಿದಂತೆ ಅನ್ನಿಸುತ್ತದೆ. ನನ್ನ ನಿನ್ನ ಸಂಬಂಧ ಬಹಳ ಹಿಂದಿನದು ಅಂತ ಅನ್ನಿಸುತ್ತದೆ." ನಾನು ಹೇಳಿದೆ "ಯಾರಿಗೆ ಗೊತ್ತು, ಅಮ್ಮ! ನಾನಂತೂ ಬರೇ ಒಂದು ದಿನ, ಅದೂ ಐದು ನಿಮಿಷ ಇಲ್ಲಿಗೆ ಬಂದಿದ್ದೆ.' ಶ್ರೀಮಾತೆ ಜೋರಾಗಿ ನಗುತ್ತಾ ನಮ್ಮಿಬ್ಬರ (ನನ್ನ ಸುಮತಿಯ) ಪ್ರೇಮ-ಭಕ್ತಿ-ನಿಷ್ಠೆಯನ್ನು ಹೊಗಳ ತೊಡಗಿದರು. ಈ ಮಾತುಗಳಿಗೆ ನಾವು ಎಷ್ಟು ಯೋಗ್ಯರೋ ತಿಳಿಯದು. ನಿಧಾನವಾಗಿ ಬಹಳ ಜನ ಸ್ತ್ರೀಭಕ್ತರು ಬರತೊಡಗಿದರು. ಎಲ್ಲರೂ ಸಹ ಶ್ರೀಮಾತೆಯವರ ಸ್ನೇಹಮಯ ನಗುಮುಖವನ್ನು ಏಕದೃಷ್ಟಿಯಿಂದ ನೋಡುತ್ತಿದ್ದಾರೆ. ಈ ಅಪೂರ್ವ ದೃಶ್ಯವನ್ನು ಹಿಂದೆಂದೂ ನಾನು ನೋಡಿಲ್ಲ. ಮಂತ್ರಮುಗ್ಧಳಾಗಿ ನಾನು ನೋಡುತ್ತಿದ್ದೆ! ಅಷ್ಟರಲ್ಲಿ ಮನೆಗೆ ಹಿಂತಿರುಗಲು ಗಾಡಿ ಬಂದಿದೆ ಎಂದು ಯಾರೋ ತಿಳಿಸಿದರು. ತಕ್ಷಣ ಶ್ರೀಮಾತೆ ಅಲ್ಲಿಂದ ಎದ್ದು ಬಂದು ಪ್ರಸಾದವನ್ನು ನನ್ನ ಬಾಯಿಯ ಬಳಿ ಹಿಡಿದು "ತಿನ್ನಮ್ಮಾ, ತಿನ್ನು" ಎಂದು ಹೇಳಿದರು. ಅಷ್ಟು ಜನರ ಮಧ್ಯೆ ನಾನೊಬ್ಬಳೆ ತಿನ್ನಲು ಸಂಕೋಚ. 'ಏಕಮ್ಮಾ, ತೆಗೆದುಕೋ' ಎಂದರು. ನಾನು ಕೈಚಾಚಿ ಪಡೆದೆ. 'ಸರಿ ಹಾಗಾದರೆ ಹೋಗಿಬರುತ್ತೇನೆ' ಎಂದು ನಮಸ್ಕರಿಸಿದೆ. "ಹಾ, ಹೋಗಿ ಬಾಮ್ಮಾ, ಮತ್ತೆ ಬಾ..... ಒಬ್ಬಳೆ ಮೆಟ್ಟಿಲು ಇಳಿಯಬಲ್ಲೆ ತಾನೇ – ಇಲ್ಲ ನಾನೂ ಜೊತೆಗೆ ಬರಲೇ?" ಎಂದು ಹೇಳುತ್ತಾ ಮೆಟ್ಟಿಲಿನವರೆಗೆ ಬಂದರು. "ನೀವು ಬರುವುದು ಬೇಡ, ನಾನು ಇಳಿಯಬಲ್ಲೆ" ಎಂದು ಹೇಳಿದೆ. ಅದನ್ನು ಕೇಳಿ ಶ್ರೀಮಾತೆ "ಸರಿ, ಒಮ್ಮೆ ಬೇಗ್ಗೇನೆ ಬಾ' ಎಂದರು. **ಎಂತಹ ಅದ್ಭುತ ಸ್ನೇಹ-ಪ್ರೀತಿ?! ನನ್ನ ಹೃದಯ ತುಂಬಿಬಂತು. ಇದು ಎಂತಹ ಅದ್ಭುತ ಪ್ರೇಮ-ಸ್ನೇಹ** ಎಂದು ಯೋಚಿಸುತ್ತಾ ಮನೆಗೆ ಹಿಂತಿರುಗಿದೆ. *(ಮುಂದುವರಿಯುವುದು)*

ಶ್ರೀಮಾತೆಯವರೊಡನೆ ಭಕ್ತರು ನಡೆಸಿದ ಆಧ್ಯಾತ್ಮಿಕ ಸಂಭಾಷಣೆಗಳ ಸಂಗ್ರಹವೇ 'ಮಾಯೇರ್ ಕಥಾ' ಎಂಬ ಬಂಗಾಳಿ ಭಾಷೆಯ ಪುಣ್ಯಗ್ರಂಥ ಇದರ ಕೆಲವು ಭಾಗಗಳನ್ನು ಕಂತುಗಳಲ್ಲಿ ವಿವೇಕಪ್ರಭವು ಪ್ರಸ್ತುತ ಪಡಿಸುತ್ತಿದೆ. ಈ ಪ್ರಯತ್ನಕ್ಕೆ ಶ್ರೀಮಾತೆಯವರ ಆಶೀರ್ವಾದವಿರಲಿ ಎಂಬುದೇ ನಮ್ಮ ಪ್ರಾರ್ಥನೆ! ಇದರ ಅನುವಾದಕರು ಈಗ ಬೆಂಗಳೂರಿನ ಹಲಸೂರಿನ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಾಮಿ ಸತ್ಯವಿದಾನಂದರು.